**ಓ.ಎಸ್.138/2018**

**ಡಿ. ಡಬ್ಲ್ಯೂ.ನಂ. - 1**

**ಸಾಕ್ಷಿಯನ್ನು ದಿನಾಂಕಃ 16.07.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**

**ಮುಂದುವರೆದ ಮುಖ್ಯ ವಿಚಾರಣೆಃ ಪ್ರತಿವಾದಿಯ ಪರ ವಕೀಲರಿಂದ**

1. ದಿಃ05.06.1996 ರಂದು ಸಾಗರದ ಉಪವಿಭಾಗಾಧಿಕಾರಿಗಳಿಗೆ ನೀಡಿರುವ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 18 ಎಂದು ಗುರುತಿಸಲಾಯಿತು.

2. ದಿಃ11.09.1995 ರಂದು ತಹಶೀಲ್ದಾರ್ ರವರಿಗೆ ನೀಡಿರುವ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 19 ಎಂದು ಗುರುತಿಸಲಾಯಿತು.

3. ಸರ್ವೆ ಸಂಖ್ಯೆ 19 ರ 2024-2025 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 20 ಎಂದು ಗುರುತಿಸಲಾಯಿತು.

4. ಸರ್ವೆ ಸಂಖ್ಯೆ 17 ರ 2024-2025 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 21 ಎಂದು ಗುರುತಿಸಲಾಯಿತು.

5. ಸರ್ವೆ ಸಂಖ್ಯೆ 9 ರ 2024-2025 ನೇ ಸಾಲಿನ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 22 ಎಂದು ಗುರುತಿಸಲಾಯಿತು.

6. ದಿಃ10.07.2026 ರ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ವಲಯ ಅರಣ್ಯಾಧಿಕಾರಿಗಳು ನೀಡಿರುವ ಉತ್ತರದ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಡಿ 23 ಎಂದು ಗುರುತಿಸಲಾಯಿತು.

ಆದ್ದರಿಂದ ವಾದಿಯ ದಾವೆಯನ್ನು ವಜಾಗೊಳಿಸಬೇಕಾಗಿ ವಿನಂತಿ.

**ಪಾಟೀ ಸವಾಲುಃ ವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.